

'ಕುಟುಂಬಕ್ಕೆ ಮಾತ್ರ' ಎಂದು ನಿಗದಿ ಆಗಿದೆಯೆ ಎಂದು ಖಾತ್ರಿ ಪಡಿಸಿಕೊಂಡೇ ಬ್ಯಾಚುಲರ್‌ಗಳು ಹೋಗಬೇಕು. ಇಲ್ಲದಿದ್ದರೆ ನಿರಾಶೆ ಕಟ್ಟಿಟ್ಟ ಬುತ್ತಿ. ಶುಕ್ರವಾರವನ್ನು ಹೀಗೆ ಕುಟುಂಬವರ್ಗಕ್ಕೆ ಸೀಮಿತಗೊಳಿಸಿದರೆ ಶುಕ್ರವಾರ ಮಾತ್ರ ರಜೆ ಇರುವ ಬ್ಯಾಚುಲರ್‌ಗಳು ಬೇರೆ ಯಾವಾಗ ಬರಬೇಕು? ಈ ಪ್ರಶ್ನೆಗೆ ಅವರಲ್ಲಿ ಉತ್ತರವಿಲ್ಲ.

ಒಮ್ಮೆ ನಾವು ಸುಮಾರು ಹದಿನೈದು ಸ್ನೇಹಿತರು (ಬ್ಯಾಚುಲರ್‌ಗಳು) ಉಮ್ಮ್ ಅಲ್ ಕ್ವುವೇನ್ ನಲ್ಲಿರುವ ಅಕ್ವಾ ಲ್ಯಾಂಡ್ ಎಂಬ ಜಲವಿಹಾರ ತಾಣಕ್ಕೆ ಹೋಗಿದ್ದೆವು. ಅಲ್ಲಿ ನೋಡಿದರೆ ಅವತ್ತು 'ಕೇವಲ ಕುಟುಂಬಕ್ಕೆ ಪ್ರವೇಶ' ಎಂಬ ದೊಡ್ಡ ಫಲಕ ನಮ್ಮನ್ನು ಸ್ವಾಗತಿಸಿತು. ದುಬೈಯಿಂದ ಅಷ್ಟು ದೂರ ಹೋದವರು ಖಾಲಿ ಹಿಂದಿರುಗಲು ಇಷ್ಟವಾಗಲಿಲ್ಲ. ಯಾರ ಅದೃಷ್ಟವೋ ಏನೋ ನಮ್ಮ ಸ್ನೇಹಿತರೊಬ್ಬರು ಪತ್ನಿಸಹಿತ ಅಲ್ಲಿಗೆ ಆಗಮಿಸಿದ್ದರು. ನಮ್ಮ ಗೋಳನ್ನು ಆಲಿಸಿದ ಅವರ ಪತ್ನಿ ತಾವೇ ಹೋಗಿ 'ನಾವೆಲ್ಲಾ ಒಂದೇ ಕುಟುಂಬಕ್ಕೆ ಸೇರಿದವರು' ಎಂದು ಹೇಳಿ ನಮಗೆಲ್ಲರಿಗೂ ಟಿಕೆಟ್ ತಂದು ಕೊಟ್ಟರು.

ಈ ಬ್ಯಾಚುಲರ್‌ಗಳನ್ನು ಕಂಡರೆ ಸರ್ಕಾರಕ್ಕೆ ಹೊಟ್ಟೆಯುರಿ ಇದ್ದರೂ, ತದ್ವಿರುದ್ಧವಾಗಿ ಇಲ್ಲಿರುವ ಕುಟುಂಬಸ್ಥರಿಗೆ ಪ್ರೀತಿ ಮತ್ತು ವಾತ್ಸಲ್ಯವಿದೆ. 'ಇವರಿಗೂ ಕುಟುಂಬವಿದೆ, ಅನಿವಾರ್ಯವಾಗಿ ಮನೆಯಿಂದ ದೂರವಿದ್ದಾರೆ' ಎಂಬ ನಮ್ಮ ವೇದನೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ತಮಗೆ ಪರಿಚಯವಿರುವವರಲ್ಲಿ, ಸಂಬಂಧಿಕರಲ್ಲಿ ಯಾರಾದರೂ ಬ್ಯಾಚುಲರ್‌ಗಳಿದ್ದರೆ ವಿಶೇಷ ಸಂದರ್ಭಗಳಲ್ಲಿ ಊಟಕ್ಕೆ ಖಂಡಿತಾ ಆಹ್ವಾನಿಸುತ್ತಾರೆ. ಹಲವು ಜನ ತಮ್ಮ ಊರಿನ ಅಷ್ಟೂ ಬ್ಯಾಚೆಲರುಗಳಿಗೆ ಹಬ್ಬದ ದಿನಗಳಲ್ಲಿ (ವರ್ಷಕ್ಕೆ ಒಮ್ಮೆಯಾದರೂ) ಊಟಕ್ಕೆ ಕರೆಯುತ್ತಾರೆ.

ಇಲ್ಲಿನ ಕಛೇರಿಗಳಲ್ಲೂ ಅಷ್ಟೇ, ಮಹಿಳೆಯರ ಸಮಯಕ್ಕೇ ಹೆಚ್ಚಿನ ಮಹತ್ವ. ಒಂದು ವೇಳೆ ಹಿಡಿದ ಕೆಲಸ ಮುಗಿಯಲು ದಿನದ ನಿಗದಿತ ಅವಧಿಗಿಂತಲೂ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದ್ದಲ್ಲಿ ಆ ಹೆಚ್ಚಿನ ಅವಧಿಯನ್ನು ಭರಿಸಬೇಕಾದವರು ಬ್ಯಾಚುಲರ್‌ಗಳು. 'ನಿಮಗೆ ಮನೆಗೆ ಹೋಗಿ ಮಾಡಲಿಕ್ಕೇನಿದೆ? ಫ್ಯಾಮಿಲಿ ಏನಾದರೂ ಇದೆಯಾ?' ಎಂಬುದು ಬಾಸ್ ಇದಕ್ಕೆ ನೀಡುವ ಸಬೂಬು.

## ಫ್ಯಾಮಿಲಿಗೆ ಮಾತ್ರ!

ಕಳೆದ ವರ್ಷ ಶಾರ್ಜಾ ಕರ್ನಾಟಕ ಸಂಘದ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಪ್ರಾಯೋಜಕ ಸಂಸ್ಥೆಯೊಂದು ತನ್ನ ಉತ್ಪನ್ನಗಳಾದ ಸೋಪು ಹಾಗೂ ಅಡುಗೆ ಎಣ್ಣೆಗಳಿರುವ ಪ್ಯಾಕೆಟ್‌ಗಳನ್ನು ಉಚಿತವಾಗಿ ಹಂಚುತ್ತಿತ್ತು. ಆದರೆ ಕಾರ್ಯಕರ್ತರು ಹುಡುಕಿ ಹುಡುಕಿ ಕೇವಲ ಮಹಿಳೆಯರಿಗೆ ಮಾತ್ರ ಆ ಪ್ಯಾಕೆಟ್ಟುಗಳನ್ನು ನೀಡುತ್ತಿದ್ದರು. ಬ್ಯಾಚುಲರ್‌ಗಳು ಕೈ ಚಾಚಿದರೆ 'ಇದು ಫ್ಯಾಮಿಲಿಗೆ ಮಾತ್ರ' ಎಂಬ ಉತ್ತರ ಸಿಕ್ಕಿತು. ನಾವೂ ಮನೆಯಲ್ಲಿ ಅಡುಗೆ ಮಾಡಿಕೊಳ್ಳುತ್ತೇವೆ ಎನ್ನುವುದು ಅವರಿಗೆ ಗೊತ್ತೇ ಇಲ್ಲವೆ?

ಅಷ್ಟಕ್ಕೂ ಬ್ಯಾಚುಲರ್ ಸದಾ ಬ್ಯಾಚುಲರ್ ಆಗಿಯೇ ಇರಬೇಕೆಂದೇನೂ ಬಯಸುವುದಿಲ್ಲ. ಕುಟುಂಬ ಜೀವನವನ್ನು ಅನುಭವಿಸಬೇಕೆಂದು ತವಕಿಸುತ್ತಲೇ ಇರುತ್ತಾರೆ. ಆದರೆ ಇಲ್ಲಿ ಕುಟುಂಬವಿದ್ದರೆ ಬರುವ ಖರ್ಚನ್ನು ನಿಭಾಯಿಸಲಾಗುವುದಿಲ್ಲ. ಬಿಟ್ಟು ಊರಿಗೆ ಹೋದರೆ ಅಲ್ಲಿ ಸೂಕ್ತ ಉದ್ಯೋಗ ಸಿಗುವ ಭರವಸೆ ಇಲ್ಲ!

ದುಬೈ ನಗರದ ಸಾರ್ವಜನಿಕ ಬಸ್ಸುಗಳಲ್ಲಿ ಮುಂದಿನ ಸಾಲಿನ 10–12 ಆಸನಗಳು ಮಹಿಳೆಯರಿಗೆ ಮತ್ತು ಕುಟುಂಬಕ್ಕೆ ಮೀಸಲು. ಆ ಸೀಟುಗಳು ಖಾಲಿ ಇದ್ದರೂ ಗಂಡಸರು ಕುಳಿತುಕೊಳ್ಳುವಂತಿಲ್ಲ. ಕೆಲವು ಸಲ ಎಲ್ಲ ಆಸನ ಫುಲ್ ಆದಾಗ, ಬೇರೆ ಮಹಿಳೆಯರು ಬಸ್ಸು ಹತ್ತಿದರೆ, ಹಿಂದಿನ ಸೀಟಿನಲ್ಲಿ ಕುಳಿತಿರುವ ಗಂಡಸರನ್ನೂ ಏಳಲು ಸೂಚಿಸಲಾಗುತ್ತದೆ. ಬಸ್ಸಿನ ಡ್ರೈವರ್ ಮೈಕ್ರೊಫೋನ್ ಮೂಲಕ ಈ ಬಗ್ಗೆ ಸೂಚನೆ ನೀಡತ್ತಾನೆ. ನೀವೇನಾದರೂ ತಕರಾರು ಎತ್ತಿದಿರೋ, ಬಸ್ ಅಲ್ಲೇ ನಿಲ್ಲಿಸಿ ಪೊಲೀಸರಿಗೆ ಫೋನ್ ಮಾಡುತ್ತಾನೆ. ಮುಂದಿನ ಕೆಲಸ ಏನಿದ್ದರೂ ಪೋಲೀಸರದ್ದು. ನಾಲ್ಕೈದು ನಿಮಿಷದೊಳಗೆ ಸೈರನ್ ಹೊಡೆಯುತ್ತಾ ಪೊಲೀಸ್ ವಾಹನ ಬರುತ್ತದೆ. ಬಸ್ ನಿಲುಗಡೆಗೆ ಕಾರಣರಾದ ಪುರುಷನನ್ನು ಮೊದಲು ಕೆಳಗೆ ಇಳಿಸಿ, ಬಸ್ ಮುಂದಕ್ಕೆ ಚಲಿಸುತ್ತದೆ. ಆ ಬಳಿಕ ಪೊಲೀಸರು ದಂಡವಸೂಲಿ ಮಾಡಿ, ತಪ್ಪೊಪ್ಪಿಗೆ ಪತ್ರ ಬರೆಸಿಕೊಳ್ಳುತ್ತಾರೆ. ಪತ್ನಿಸಮೇತ ಸೀಟಿನಲ್ಲಿ ಕುಳಿತಿರುವ ಪುರಷರಿಗೆ ಮಾತ್ರ ಹೀಗೆ ಮಹಿಳೆಯರಿಗೆ ಸೀಟು ಬಿಟ್ಟುಕೊಡಲು ಹೇಳುವುದಿಲ್ಲ. ಏನಿದ್ದರೂ ಬ್ಯಾಚುಲರ್‌ಗಳಿಗೇ ಶಿಕ್ಷೆ!

ದುಬೈಯಲ್ಲಿ ಬ್ಯಾಚುಲರ್‌ಗಳಾಗಿ ಇರುವವರು ಪಾಪಿಗಳಲ್ಲದೆ ಇನ್ಯಾರು?